4003/5031/6011/7011

**I Semester 3 Year LL.B./II Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, September/October 2023 (June 2023)**

# LAW OF TORTS

Duration : 3 Hours | Max. Marks : 80

**Instructions :** 
1. **Answer all five questions.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answers should be written either in English or Kannada completely.**

## UNIT – I

Q. No. 1. a) Define tort. Distinguish it from crime and contract. Marks : 10
ಅಪಕೃತ್ಯವನ್ನು ವ್ಯಾಖ್ಯಾನಿಸಿ. ಅಪಕೃತ್ಯವನ್ನು ಅಪರಾಧ ಮತ್ತು ಕರಾರಿನಿಂದ ವ್ಯತ್ಯಸಿಸಿ.

OR/ಅಥವಾ

Q. No. 1. a) Discuss the importance of mental elements in tortious liability. Marks : 10
ಅಪಕೃತ್ಯದ ಹೊಣೆಗಾರಿಕೆಯಲ್ಲಿ ಮಾನಸಿಕ ಅಂಶಗಳ ಪ್ರಾಮುಖ್ಯತೆಯನ್ನು ಚರ್ಚಿಸಿ.

Q. No. 1. b) Evolution of torts. Marks : 6
ಅಪಕೃತ್ಯದ ವಿಕಸನ.

OR/ಅಥವಾ

Q. No. 1. b) Injuria sine damnum. Marks : 6
ನಷ್ಟವಿಲ್ಲದ ಹಾನಿ.

## UNIT – II

Q. No. 2. a) Examine the general defences available to an action in tort. Marks : 10
ಅಪಕೃತ್ಯದ ಕ್ರಮಕ್ಕೆ ಲಭ್ಯವಿರುವ ಸಾಮಾನ್ಯ ಪ್ರತಿರಕ್ಷೆಗಳನ್ನು ಪರಿಶೀಲಿಸಿ.

OR/ಅಥವಾ

Q. No. 2. a) Discuss the circumstances of master's liability for the acts of the servant along with cases. Marks : 10
ಸೇವಕನ ಕೃತ್ಯಗಳಿಗೆ ಮಾಲೀಕನ ಹೊಣೆಗಾರಿಕೆಯ ಸಂದರ್ಭಗಳನ್ನು ಪ್ರಕರಣಗಳೊಂದಿಗೆ ಚರ್ಚಿಸಿ.

**P.T.O.**

Q. No. 2. b) A driver suspecting that some boys were pilfering sugar from his employer's truck, in order to prevent theft and protect the employer's property struck the boy. The boy fell and was injured. Whether the employer is liable for the act of the driver ? Decide. Marks : 6

ಒಬ್ಬ ಚಾಲಕನು ತನ್ನ ಉದ್ಯೋಗದಾತನಿಗೆ ಸೇರಿದ ಟ್ರಕ್‌ನಿಂದ ಕೆಲವು ಹುಡುಗರು ಸಕ್ಕರೆಯನ್ನು ಕಳ್ಳತನ ಮಾಡುತ್ತಿರುವರೆಂದು ಅನುಮಾನಗೊಂಡು, ಕಳ್ಳತನವನ್ನು ತಡೆಯಲು ಮತ್ತು ಉದ್ಯೋಗದಾತನ ಸ್ವತ್ತನ್ನು ರಕ್ಷಿಸಲು ಅವರನ್ನು ಹೊಡೆಯುತ್ತಾನೆ. ಹಾಗೆ ಬಿದ್ದ ಹುಡುಗನಿಗೆ ಗಾಯವಾಗುತ್ತದೆ. ಉದ್ಯೋಗದಾತನು ತನ್ನ ಚಾಲಕನ ಕೃತ್ಯಕ್ಕೆ ಹೊಣೆಗಾರನಾಗುವನೇ ? ನಿರ್ಧರಿಸಿ.

OR/ಅಥವಾ

Q. No. 2. b) The defendant shot the plaintiff's dog which was chasing and attacking the defendant's sheep and pigs. Can the defendant be made liable for the act ? Decide. Marks : 6

ಪ್ರತಿವಾದಿಯು ತನ್ನ ಕುರಿ ಮತ್ತು ಹಂದಿಗಳನ್ನು ಅಟ್ಟಿಸಿಕೊಂಡು ಮತ್ತು ಆಕ್ರಮಣ ಮಾಡಿದ ವಾದಿಯ ನಾಯಿಯನ್ನು ಗುಂಡಿಟ್ಟು ಹೊಡೆದನು. ಈ ಕೃತ್ಯಕ್ಕೆ ವಾದಿಯು ಪ್ರತಿವಾದಿಯನ್ನು ಹೊಣೆಗಾರನನ್ನಾಗಿ ಮಾಡಬಹುದೇ ? ನಿರ್ಧರಿಸಿ.

## UNIT – III

Q. No. 3. a) Explain the rule in Rylands V. Fletcher. Distinguish it from absolute liability. Marks : 10

ರೈಲ್ಯಾಂಡ್ಸ್ ವಿ. ಫ್ಲೆಚರ್‌ನಲ್ಲಿನ ನಿಯಮವನ್ನು ವಿವರಿಸಿ. ಇದನ್ನು ಸಂಪೂರ್ಣ ಹೊಣೆಗಾರಿಕೆಯಿಂದ ವ್ಯತ್ಯಸಿಸಿ.

OR/ಅಥವಾ

Q. No. 3. a) Discuss the tort of negligence with the help of decided cases. Marks : 10

ನಿರ್ಲಕ್ಷ್ಯತೆ ಅಪಕೃತ್ಯವನ್ನು ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ಚರ್ಚಿಸಿ.

Q. No. 3. b) Remoteness of damage. Marks : 6

ದೂರ ಸಂಬಂಧದ ಹಾನಿ.

OR/ಅಥವಾ

Q. No. 3. b) Legal remedies. Marks : 6

ಕಾನೂನಾತ್ಮಕ ಪರಿಹಾರಗಳು.

## UNIT – IV

Q. No. 4. a) Explain false imprisonment. State the remedies for false imprisonment. Marks : 10

ಮಿಥ್ಯಾಬಂಧನವನ್ನು ವಿವರಿಸಿ. ಮಿಥ್ಯಾಬಂಧನಕ್ಕಿರುವ ಪರಿಹಾರಗಳನ್ನು ತಿಳಿಸಿ.

OR/ಅಥವಾ

Q. No. 4. a) What is malicious prosecution ? Discuss its essentials. Marks : 10
ದುರುದ್ದೇಶಪೂರಿತ ಅಭಿಯೋಜನೆ ಎಂದರೇನು ? ಇದರ ಅವಶ್ಯಕಾಂಶಗಳನ್ನು ಚರ್ಚಿಸಿ.

Q. No. 4. b) The plaintiff is a famous amateur football Champion. The defendant used the caricature of the plaintiff without his consent and paying no royalty in their advertisement. The advertisement portrayed him as, he has done it for gain and reward. Being defamed in his reputation he intends to claim damages. Advise. Marks : 6
ವಾದಿಯು ಒಬ್ಬ ಪ್ರಖ್ಯಾತ ಹವ್ಯಾಸಿ ಫುಟ್‌ಬಾಲ್ ಕ್ರೀಡಾಳು ಆಗಿದ್ದಾನೆ. ಪ್ರತಿವಾದಿಯು ಅವರ ಜಾಹೀರಾತಿನಲ್ಲಿ ವಾದಿಯ ವ್ಯಂಗ್ಯಚಿತ್ರವನ್ನು ಅವನ ಸಮ್ಮತಿಯಿಲ್ಲದೆ ಹಾಗೂ ಯಾವುದೇ ಹಣ ನೀಡದೆ ಬಳಸಿಕೊಂಡಿದ್ದಾನೆ. ಆ ಜಾಹೀರಾತು ಅದನ್ನು ಅವನು ಹಣಕ್ಕಾಗಿ ಮತ್ತು ಪ್ರತಿಫಲಕ್ಕಾಗಿ ಮಾಡಿದ್ದಾನೆಂದು ಬಿಂಬಿಸಿದೆ. ಅವನ ಗೌರವಕ್ಕೆ ಮಾನಹಾನಿಯಾಗಿದೆ ಎಂದು ವಾದಿಯು ಪರಿಹಾರ ಕೇಳಲು ಬಯಸಿದ್ದಾನೆ. ಸಲಹೆ ನೀಡಿ.

OR/ಅಥವಾ

Q. No. 4. b) 'A' warden of a prison, forcibly fed a hunger-striking prisoner to save the life of 'B' a prisoner. 'B' the prisoner sued 'A' for damages. Will he succeed ? Decide. Marks : 6
ಸೆರೆಮನೆಯ ಅಧೀಕ್ಷಕನಾದ 'A' ನು ಉಪವಾಸ ಸತ್ಯಾಗ್ರಹದಲ್ಲಿದ್ದ ಖೈದಿ 'B' ಗೆ ಬಲಪ್ರಯೋಗದೊಡನೆ ಆಹಾರವನ್ನು ತಿನ್ನಿಸಿದನು. ಖೈದಿಯಾದ 'B' ನು 'A' ವಿರುದ್ಧ ಪರಿಹಾರಕ್ಕಾಗಿ ದಾವೆ ಹೂಡಿದನು. ಅವನು ಯಶಸ್ವಿಯಾಗುವನೇ ? ನಿರ್ಧರಿಸಿ.

## UNIT – V

Q. No. 5. a) Discuss the salient features of Consumer Protection Act, 2019. Marks : 10
ಗ್ರಾಹಕ ಸಂರಕ್ಷಣಾ ಅಧಿನಿಯಮ, 2019 ರ ಪ್ರಮುಖ ವೈಶಿಷ್ಟ್ಯಗಳನ್ನು ಚರ್ಚಿಸಿ.

OR/ಅಥವಾ

Q. No. 5. a) The Motor Vehicles Act, 1988 makes it necessary to insure motor vehicles against third party risks. Discuss. Marks : 10
ಮೋಟಾರು ವಾಹನ ಅಧಿನಿಯಮ, 1988 ಮೋಟಾರು ವಾಹನಗಳನ್ನು ಮೂರನೇ ಪಕ್ಷಗಾರರ ಅಪಾಯಗಳಿಗೆ ವಿಮೆಗೊಳಿಸುವುದನ್ನು ಅಗತ್ಯಪಡಿಸಿದೆ. ಚರ್ಚಿಸಿ.

Q. No. 5. b) Mediation under Consumer Protection Act, 2019. Marks : 6
ಗ್ರಾಹಕ ಸಂರಕ್ಷಣಾ ಅಧಿನಿಯಮ, 2019 ರ ಅಡಿಯಲ್ಲಿ ಮಧ್ಯಸ್ಥಿಕೆ.

OR/ಅಥವಾ

Q. No. 5. b) Claims tribunal. Marks : 6
ಹಕ್ಕು ಪ್ರತಿಪಾದನಾ ನ್ಯಾಯಾಧಿಕರಣ.

---

4003/5031/6011/7011

**I Semester 3 Year LL.B./II Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, March/April 2024 (Odd Sem.)**

# LAW OF TORTS

Duration : 3 Hours

Max. Marks : 80

**Instructions : 1. Answer all five Units.**

**2. One essay type question and short note/problems is compulsory from each Unit.**

**3. Figures to the right indicate marks.**

**4. Answer should be written either in English or Kannada completely.**

## UNIT – I

Q. No. 1. a) Discuss the importance of mental elements in tortious liability. Marks : 10

ಅಪಕೃತ್ಯದ ಹೊಣೆಗಾರಿಕೆಯಲ್ಲಿ ಮಾನಸಿಕ ಅಂಶಗಳ ಪ್ರಾಮುಖ್ಯತೆಯನ್ನು ಚರ್ಚಿಸಿ.

OR/ಅಥವಾ

Q. No. 1. a) Explain 'damnum sine injuria' and 'injuria sine damnum' with decided cases. Marks : 10

ನಿರ್ಧರಿತ ಪ್ರಕರಣಗಳೊಂದಿಗೆ 'ಹಾನಿಯಿಲ್ಲದ ನಷ್ಟ' ಮತ್ತು 'ನಷ್ಟವಿಲ್ಲದ ಹಾನಿ'ಯನ್ನು ವಿವರಿಸಿ.

Q. No. 1. b) Ubi jus ibi remedium. Marks : 6

ಎಲ್ಲಿ ಹಕ್ಕಿದೆಯೊ ಅಲ್ಲಿ ಪರಿಹಾರವಿದೆ.

OR/ಅಥವಾ

Q. No. 1. b) Tort and crime distinction. Marks : 6

ಅಪಕೃತ್ಯ ಮತ್ತು ಅಪರಾಧದ ವ್ಯತ್ಯಾಸ.

UNIT – II

Q. No. 2. a) Explain the basis of vicarious liability. When the master is liable for the wrongful acts of his servant ? Discuss. Marks : 10

ಬದಲಿ ಹೊಣೆಗಾರಿಕೆಯ ಆಧಾರವನ್ನು ವಿವರಿಸಿ. ಮಾಲೀಕನು ಯಾವಾಗ ಸೇವಕನ ಅಕ್ರಮಕಾರಕ ಕೃತ್ಯಗಳಿಗೆ ಹೊಣೆಗಾರನಾಗುತ್ತಾನೆ ? ಚರ್ಚಿಸಿ.

OR/ಅಥವಾ

Q. No. 2. a) Explain the justification of torts in the following : Marks : 10

ಅಪಕೃತ್ಯಕ್ಕೆ ಇರುವ ಸಮರ್ಥನೆಗಳನ್ನು ಕೆಳಗಿನವುಗಳಲ್ಲಿ ವಿವರಿಸಿ :

(a) Private defence.

ಖಾಸಗಿ ಪ್ರತಿರಕ್ಷೆ.

(b) Inevitable accident.

ತಪ್ಪಿಸಲಾಗದ ಅಪಘಾತ.

Q. No. 2. b) A lady, knowing that the driver of the car was drunk chose to travel in it. Due to the driver's negligence an accident was caused and the lady was injured. Whether the lady passenger is entitled to claim compensation against the driver ? Decide. Marks : 6

ಒಬ್ಬ ಮಹಿಳೆಯು, ಕಾರಿನ ಚಾಲಕನು ಪಾನಮತ್ತನಾಗಿದ್ದಾನೆಂದು ತಿಳಿದಿದ್ದರೂ ಆ ಕಾರಿನಲ್ಲಿ ಪ್ರಯಾಣಿಸಲು ಆಯ್ಕೆ ಮಾಡುತ್ತಾಳೆ. ಚಾಲಕನ ನಿರ್ಲಕ್ಷತನದಿಂದ ಅಪಘಾತವು ಸಂಭವಿಸಿತು ಮತ್ತು ಆ ಮಹಿಳೆಯು ಗಾಯಗೊಂಡಳು. ಆ ಮಹಿಳಾ ಪ್ರಯಾಣಿಕಳು ಚಾಲಕನ ವಿರುದ್ಧ ಪರಿಹಾರ ಕೇಳಲು ಅರ್ಹಳಾಗುವಳೇ ? ನಿರ್ಧರಿಸಿ.

OR/ಅಥವಾ

Q. No. 2. b) The plaintiff was injured by the fall of a lamp overhanging the footway adjoining the defendant's house. The lamp was attached to his house by the defendant through an independent contractor. Decide whether the plaintiff can take action against the defendant and make him liable for damages. Marks : 6

ಪ್ರತಿವಾದಿಯ ಮನೆಗೆ ಹೊಂದಿಕೊಂಡ, ನಡೆದಾಡುವ ದಾರಿಯಲ್ಲಿ ನೇತಾಡುತ್ತಿದ್ದ ದೀಪವು ವಾದಿಯ ಮೇಲೆ ಬಿದ್ದು ಗಾಯಗೊಂಡನು. ಆ ದೀಪವನ್ನು ಪ್ರತಿವಾದಿಯು ತನ್ನ ಮನೆಗೆ ಒಬ್ಬ ಸ್ವತಂತ್ರ ಗುತ್ತಿಗೆದಾರನಿಂದ ಹಾಕಿಸಿಕೊಂಡಿದ್ದನು. ವಾದಿಯು ಪ್ರತಿವಾದಿಯ ವಿರುದ್ಧ ಕ್ರಮ ತೆಗೆದುಕೊಂಡು ಅವನನ್ನು ನಷ್ಟ ಪರಿಹಾರಕ್ಕೆ ಹೊಣೆಗಾರನಾಗಿಸಬಹುದೇ? ನಿರ್ಧರಿಸಿ.

## UNIT – III

Q. No. 3. a) Explain the various kinds of remedies available in tort. Marks : 10
ಅಪಕೃತ್ಯದಲ್ಲಿರುವ ವಿವಿಧ ಬಗೆಗಳ ಪರಿಹಾರಗಳನ್ನು ವಿವರಿಸಿ.

OR/ಅಥವಾ

Q. No. 3. a) Discuss remoteness of damage. Refer decided cases. Marks : 10
ದೂರ ಸಂಬಂಧದ ಹಾನಿಯನ್ನು ಚರ್ಚಿಸಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 3. b) Liability for causing nervous shock. Marks : 6
ಮಾನಸಿಕ ಆಘಾತವನ್ನು ಉಂಟು ಮಾಡಿದ್ದಕ್ಕಾಗಿ ಹೊಣೆಗಾರಿಕೆ.

OR/ಅಥವಾ

Q. No. 3. b) Private nuisance. Marks : 6
ಖಾಸಗಿ ಉಪದ್ರವ.

## UNIT – IV

Q. No. 4. a) Discuss the essentials of defamation with its defences. Marks : 10
ಮಾನಹಾನಿಯ ಅವಶ್ಯಕಾಂಶಗಳನ್ನು ಇದರ ಪ್ರತಿರಕ್ಷೆಗಳೊಂದಿಗೆ ಚರ್ಚಿಸಿ.

OR/ಅಥವಾ

Q. No. 4. a) What is Trespass to land ? Discuss the remedies available against it. Marks : 10
ಭೂಮಿಯ ಅತಿಕ್ರಮ ಪ್ರವೇಶ ಎಂದರೇನು ? ಇದರ ವಿರುದ್ಧ ಲಭ್ಯವಿರುವ ಪರಿಹಾರಗಳನ್ನು ಚರ್ಚಿಸಿ.

Q. No. 4. b) A school master refused to permit a school boy to go with his mother unless an amount due from him is paid. The boy was not knowing of his restraint. Whether this act amounts to false imprisonment ? Decide. Marks : 6
ಒಬ್ಬ ಶಾಲಾ ಮಾಸ್ತರನು ಒಬ್ಬ ಶಾಲಾ ವಿದ್ಯಾರ್ಥಿಯಿಂದ ಬಾಕಿ ಇರುವ ಹಣವು ಪಾವತಿಯಾಗುವವರೆಗೂ ಅವನನ್ನು ತಾಯಿಯ ಜೊತೆ ಹೋಗಲು ತಿರಸ್ಕರಿಸಿದನು. ಆ ವಿದ್ಯಾರ್ಥಿಗೆ ತನ್ನನ್ನು ನಿರ್ಬಂಧಿಸಿದ ಬಗ್ಗೆ ತಿಳಿದಿರುವುದಿಲ್ಲ. ಈ ಕೃತ್ಯವು ಮಿಥ್ಯಾ ಬಂಧನವಾಗುವುದೇ ? ನಿರ್ಧರಿಸಿ.

OR/ಅಥವಾ

Q. No. 4. b) Mr. 'A' was about to sit on a chair and the chair is pulled from behind by Mr. 'B' and Mr. 'A' falls on the ground. Whether Mr. 'B' is liable for any tortious act ? Decide. Marks : 6

ಮಿ. 'A' ನು ಕುರ್ಚಿಯಲ್ಲಿ ಕುಳಿತುಕೊಳ್ಳುವಾಗ, ಮಿ. 'B' ನು ಹಿಂದಿನಿಂದ ಕುರ್ಚಿಯನ್ನು ಎಳೆಯುತ್ತಾನೆ ಮತ್ತು ಮಿ. 'A' ನು ನೆಲದ ಮೇಲೆ ಬೀಳುತ್ತಾನೆ. ಮಿ. 'B' ನು ಯಾವುದಾದರೂ ಅಪಕೃತ್ಯಕ್ಕೆ ಹೊಣೆಗಾರನೇ ? ನಿರ್ಧರಿಸಿ.

## UNIT – V

Q. No. 5. a) Write a descriptive note on National Consumer Commission. Marks : 10

ರಾಷ್ಟ್ರೀಯ ಗ್ರಾಹಕರ ಆಯೋಗದ ಬಗ್ಗೆ ಒಂದು ವಿವರವಾದ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. a) Discuss the composition, jurisdiction and procedure of district consumer dispute redressal forum. Marks : 10

ಜಿಲ್ಲಾ ಗ್ರಾಹಕ ವಿವಾದ ಪರಿಹಾರ ವೇದಿಕೆಯ ರಚನೆ, ನ್ಯಾಯಾಧಿಕಾರ ವ್ಯಾಪ್ತಿ ಮತ್ತು ಪ್ರಕ್ರಿಯೆಯನ್ನು ಚರ್ಚಿಸಿ.

Q. No. 5. b) Product liability. Marks : 6

ಉತ್ಪನ್ನದ ಹೊಣೆಗಾರಿಕೆ.

OR/ಅಥವಾ

Q. No. 5. b) Liability without fault under Motor Vehicles Act. Marks : 6

ಮೋಟಾರು ವಾಹನ ಅಧಿನಿಯಮದ ಅಡಿಯಲ್ಲಿ ದೋಷವಿಲ್ಲದ ಹೊಣೆಗಾರಿಕೆ.

---

**4003/5031/6011/7011**

**I Semester 3 Year LL.B./II Semester 5 Year B.A. LL.B. (Maj.-Min. System)/ B.B.A. LL.B./B.Com. LL.B. (Even Sem.) Examination, August/September 2024**

**LAW OF TORTS**

Duration : 3 Hours Max. Marks : 80

**Instructions :**
1. **Answer all five Units.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answer should be written either in English or Kannada completely.**

UNIT – I

Q. No. 1. (a) Every injury is damage but every damage is not injury. Discuss. Marks : 10

ಪ್ರತಿಯೊಂದು ಕ್ಷತಿಯು ಹಾನಿಯಾಗಿರುತ್ತದೆ, ಆದರೆ ಪ್ರತಿಯೊಂದು ಹಾನಿಯು ಕ್ಷತಿಯಾಗಿರುವುದಿಲ್ಲ – ಚರ್ಚಿಸಿರಿ.

OR/ಅಥವಾ

Q. No. 1. (a) Define tortious liability. Distinguish it from contractual and criminal liability. Marks : 10

ಅಪಕೃತ್ಯದ ಹೊಣೆಗಾರಿಕೆಯನ್ನು ವ್ಯಾಖ್ಯಾನಿಸಿ. ಇದನ್ನು ಒಪ್ಪಂದದ ಮತ್ತು ಅಪರಾಧ ಹೊಣೆಗಾರಿಕೆಯಿಂದ ವ್ಯತ್ಯಾಸಿಸಿ.

Q. No. 1. (b) Mental elements in torts. Marks : 6

ಅಪಕೃತ್ಯದಲ್ಲಿ ಮಾನಸಿಕ ಅಂಶಗಳು.

OR/ಅಥವಾ

Q. No. 1. (b) Write a short note on 'Ubi jus ibi Remedium'. Marks : 6

'ಎಲ್ಲಿ ಹಕ್ಕಿದೆಯೋ ಅಲ್ಲಿ ಪರಿಹಾರವಿದೆ' – ಒಂದು ಲಘು ಟಿಪ್ಪಣಿ ಬರೆಯಿರಿ.

UNIT – II

Q. No. 2. (a) Explain the defences available to the defendant for the tort committed by him. Marks : 10

ಪ್ರತಿವಾದಿಯು ಮಾಡಿದ ಅಪಕೃತ್ಯಕ್ಕೆ ಇರುವ ಪ್ರತಿರಕ್ಷಣೆಗಳನ್ನು ವಿವರಿಸಿ.

OR/ಅಥವಾ

Q. No. 2. (a) How do you determine the master-servant relationship for the purpose of vicarious liability ? Marks : 10

ಬದಲಿ ಹೊಣೆಗಾರಿಕೆಯ ಸಲುವಾಗಿ ಮಾಲೀಕ – ಸೇವಕ ಸಂಬಂಧವನ್ನು ಹೇಗೆ ನಿರ್ಧರಿಸುವಿರಿ ?

Q. No. 2. (b) A conductor of a private bus commits an accident at the time of reversing the bus for return journey and injuries 'A'. Can 'A' recover damages from the owner of the private bus ? Marks : 6

ಖಾಸಗಿ (ಬಸ್) ವಾಹನದ ಕಂಡಕ್ಟರನು ಬಸ್ಸನ್ನು ಮರು ಪ್ರಯಾಣದ ಸಲುವಾಗಿ ಹಿಂದಕ್ಕೆ ತಿರುಗಿಸುತ್ತಿದ್ದಾಗ ಅಪಘಾತಕ್ಕೀಡು ಮಾಡಿ 'ಅ' ನನ್ನು ಗಾಯಗೊಳಿಸುತ್ತಾನೆ. 'ಅ'ನು ಖಾಸಗಿ ಬಸ್ ಮಾಲೀಕನಿಂದ ನಷ್ಟ ಪರಿಹಾರ ಪಡೆಯಬಹುದೇ ?

OR/ಅಥವಾ

Q. No. 2. (b) "Respondent superior" doctrine. Marks : 6

"ಪ್ರತಿವಾದಿಯ ಉನ್ನತಸ್ಥಾನ" ತತ್ವ.

UNIT – III

Q. No. 3. (a) Explain the essentials of negligence. Marks : 10

ನಿರ್ಲಕ್ಷ್ಯದ ಅವಶ್ಯಕಾಂಶಗಳನ್ನು ವಿವರಿಸಿ.

OR/ಅಥವಾ

Q. No. 3. (a) What is nuisance ? Explain different kinds of nuisance with case laws. Marks : 10

ಉಪದ್ರವ ಎಂದರೇನು ? ವಿವಿಧ ರೀತಿಯ ಉಪದ್ರವವನ್ನು ಪ್ರಕರಣಗಳೊಂದಿಗೆ ವಿವರಿಸಿ.

Q. No. 3. (b) Kinds of remedies under law of torts. Marks : 6

ಅಪಕೃತ್ಯದ ಕಾನೂನಿನ ಅಡಿಯಲ್ಲಿ ದೊರೆಯುವ (ಸಿಗುವ) ವಿವಿಧ ಪರಿಹಾರಗಳು.

OR/ಅಥವಾ

Q. No. 3. (b) Write a short note on strict liability. Marks : 6

'ಕಡ್ಡಾಯ ಹೊಣೆಗಾರಿಕೆ'ಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

UNIT – IV

Q. No. 4. (a) Explain the essentials of false imprisonment with the case laws. Marks : 10

ಮಿಥ್ಯ ಬಂಧೀಕರಣದ ಅವಶ್ಯಕಾಂಶಗಳನ್ನು ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ

Q. No. 4. (a) Define defamation. Explain the essentials of defamation with the appropriate cases. Marks : 10

ಮಾನಹಾನಿಯನ್ನು ವ್ಯಾಖ್ಯಾನಿಸಿ. ಮಾನಹಾನಿಯ ಅವಶ್ಯಕಾಂಶಗಳನ್ನು ಸೂಕ್ತ ಪ್ರಕರಣಗಳೊಂದಿಗೆ ವಿವರಿಸಿ.

Q. No. 4. (b) State the facts and rules laid down in – Bird v/s Jones. Marks : 6

ಬರ್ಡ್ v/s ಜೋನ್ಸ್ ಪ್ರಕರಣದಲ್ಲಿ ಇರುವ ವಸ್ತುಸ್ಥಿತಿ ಮತ್ತು ನಿಯಮಗಳನ್ನು ತಿಳಿಸಿ.

OR/ಅಥವಾ

Q. No. 4. (b) Marital rights – write short notes. Marks : 6

ವೈವಾಹಿಕ ಹಕ್ಕುಗಳು – ಲಘು ಟಿಪ್ಪಣಿ ಬರೆಯಿರಿ.

UNIT – V

Q. No. 5. (a) Who is a consumer ? Explain the rights of consumers. Marks : 10

ಗ್ರಾಹಕ ಎಂದರೆ ಯಾರು ? ಗ್ರಾಹಕರ ಹಕ್ಕುಗಳನ್ನು ವಿವರಿಸಿ.

OR/ಅಥವಾ

Q. No. 5. (a) State the salient features of Motor Vehicles Act – 1988. Marks : 10

ಮೋಟಾರು ವಾಹನ ಕಾಯಿದೆ 1988 ರ ಪ್ರಮುಖ ವೈಶಿಷ್ಟ್ಯತೆಗಳನ್ನು ತಿಳಿಸಿ.

Q. No. 5. (b) Write short notes on – 'Deficiency in Service'. Marks : 6

'ಸೇವೆಗಳಲ್ಲಿ ಕೊರತೆ'ಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. (b) Motor vehicle claims tribunal. Marks : 6

ಮೋಟಾರು ವಾಹನ ಕ್ಲೈಮ್ಸ್ ನ್ಯಾಯಾಧೀಕಾರ.

---

**I Semester 3 Year LL.B./II Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, January/February 2025 (Odd Sem.)**

## LAW OF TORTS

Duration : 3 Hours Max. Marks : 80

**Instructions :** **1. Answer all five Units.**

**2. One essay type question and short note/ problem is compulsory from each Unit.**

**3. Figures to the right indicate marks.**

**4. Answer should be written either in English or Kannada completely.**

UNIT – I

Q. No. 1. a) "Torts are civil wrongs, but all civil wrongs are not torts." Justify the statement with cases. Marks : 10

"ಅಪಕೃತ್ಯಗಳು ದಿವಾಣಿ ಅಪರಾಧಗಳಾಗಿವೆ, ಆದರೆ ಎಲ್ಲಾ ದಿವಾಣಿ ಅಪರಾಧಗಳು ಅಪಕೃತ್ಯಗಳಾಗುವುದಿಲ್ಲ." ಈ ವಾಕ್ಯವನ್ನು ಮೊಕದ್ದಮೆಗಳೊಂದಿಗೆ ವಿವರಿಸಿ.

OR/ಅಥವಾ

Q. No. 1. a) Explain the importance of mental element in torts. Marks : 10

ಅಪಕೃತ್ಯದಲ್ಲಿ ಮಾನಸಿಕ ಅಂಶದ ಪ್ರಾಮುಖ್ಯತೆಯನ್ನು ವಿವರಿಸಿರಿ.

Q. No. 1 b) An MLA of Karnataka was wrongfully detained by the police while he was going to attend the assembly session. He was not produced before the magistrate within requisite period. Which legal right is violated ? Advice him. Marks : 6

ಕರ್ನಾಟಕದ ಒಬ್ಬ ಎಂ.ಎಲ್.ಎ. ರವರನ್ನು ಪೊಲೀಸರು ಅವರು ವಿಧಾನ ಸಭೆಗೆ ಹೋಗುವಾಗ ಕಾನೂನು ಬಾಹಿರವಾಗಿ ಬಂಧಿಸಿರುತ್ತಾರೆ. ಅವರನ್ನು ಮ್ಯಾಜಿಸ್ಟ್ರೇಟ್‌ರವರ ಮುಂದೆ ನಿಗದಿತ ವೇಳೆಯೊಳಗೆ ಹಾಜರುಪಡಿಸಲಿಲ್ಲ. ಯಾವ ಕಾನೂನುಬದ್ಧ ಹಕ್ಕು ಚ್ಯುತಿಯಾಗಿವೆ ? ಅವರಿಗೆ ಸಲಹೆ ಕೊಡಿ.

OR/ಅಥವಾ

Q. No. 1. b) Distinguish between tort and contract. Marks : 6

ಅಪಕೃತ್ಯ ಮತ್ತು ಕರಾರು ಮಧ್ಯೆ ವ್ಯತ್ಯಾಸ.

P.T.O.

## UNIT – II

Q. No. 2. a) Explain the doctrine of "Volenti non fit injuria" with its various exceptions. Marks : 10

"ಸಮ್ಮತಿಸಿ ಮಾಡಿಕೊಂಡದ್ದು ಕ್ಷತಿಯಲ್ಲ" ಎಂಬ ಸಿದ್ಧಾಂತವನ್ನು ವಿವಿಧ ಅಪವಾದಗಳೊಂದಿಗೆ ವಿವರಿಸಿ.

OR/ಅಥವಾ

Q. No. 2. a) Explain the principle of vicarious liability. Marks : 10

ಬದಲಿ ಹೊಣೆಗಾರಿಕೆಯ ತತ್ವವನ್ನು ವಿವರಿಸಿ.

Q. No. 2. b) The defendant left his car leaving his dog inside and went for shopping. When he came back, he was told that the dog broke the glass of the car and a splinter of the glass flow into the plaintiff's eye and blinded him. Decide his liability. Marks : 6

ಪ್ರತಿವಾದಿಯು ತನ್ನ ಸಾಕುನಾಯಿಯನ್ನು ಕಾರಿನ ಒಳಗೆ ಬಿಟ್ಟು, ಅಂಗಡಿಯಲ್ಲಿ ಸಾಮಾನುಗಳನ್ನು ಖರೀದಿಸಲು ಹೋಗುವನು. ಅವನು ಹಿಂತಿರುಗಿ ಬರುವಾಗ, ನಾಯಿಯು ಕಾರಿನ ಗಾಜನ್ನು ಒಡೆದುದರಿಂದ ಅದರ ಗಾಜಿನ ತುಂಡು ವಾದಿಯ ಕಣ್ಣಿಗೆ ತಾಗಿ ಕುರುಡಾದನೆಂದು ಹೇಳಲ್ಪಡುವನು. ಅವನ ಹೊಣೆಗಾರಿಕೆಯನ್ನು ನಿರ್ಧರಿಸಿರಿ.

OR/ಅಥವಾ

Q. No. 2. b) Mr. Anthony took his three days old child to a Government Hospital for treatment. A few days later a nurse incharge of the ward told him that the child was cured and he was advised to buy a rubber apparatus to carry the child. He bought the appliance and went back on the same day to the hospital to fetch the child. But he was informed that the child had been taken away by someone else. Anthony was unable to find the child inspite of his hectic efforts. What is the remedy open to him ? Marks : 6

ಆಂಥೋನಿ ಎಂಬುವವನು ತನ್ನ ಮೂರು ದಿನದ ಮಗುವನ್ನು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದನು. ಆ ವಾರ್ಡಿನ ದಾದಿಯು ಕೆಲವು ದಿನಗಳ ನಂತರ ಮಗು ಗುಣಮುಖವಾಗಿದೆ ಮತ್ತು ಅದನ್ನು ಕೊಂಡೊಯ್ಯಲು ರಬ್ಬರ್ ಸಲಕರಣೆ ತರಲು ಹೇಳಿದಳು. ಆತನು ಸಲಕರಣೆಯನ್ನು ಅದೇ ದಿನ ಕೊಂಡು ಮಗುವನ್ನು ತೆಗೆದುಕೊಂಡು ಹೋಗಲು ಆಸ್ಪತ್ರೆಗೆ ಹೋದನು. ಅಷ್ಟರಲ್ಲಿ ಬೇರೆಯವರೊಬ್ಬರು ಮಗುವನ್ನು ತೆಗೆದುಕೊಂಡು ಹೋದರೆಂದು ದಾದಿಯು ತಿಳಿಸಿದಳು. ಆಂಥೋನಿಯು ಎಷ್ಟು ಹುಡುಕಿದರೂ ಮಗು ಸಿಗುವುದಿಲ್ಲ. ಅವನಿಗೆ ಇರುವ ಪರಿಹಾರ ಮಾರ್ಗವೇನು ?

UNIT – III

Q. No. 3. a) Explain damages and different kinds of damages. Marks : 10

ನಷ್ಟ ಪರಿಹಾರ ಎಂದರೇನು ? ವಿವಿಧ ರೀತಿಯ ನಷ್ಟ ಪರಿಹಾರಗಳನ್ನು ವಿವರಿಸಿ.

OR/ಅಥವಾ

Q. No. 3. a) What is Negligence ? Explain the ingredients of the tort of Negligence with the help of decided cases. Marks : 10

'ನಿರ್ಲಕ್ಷತೆ' ಎಂದರೇನು ? ನಿರ್ಧರಿತ ಪ್ರಕರಣಗಳಿಂದ ಅದರ ಲಕ್ಷಣಗಳನ್ನು ವಿವರಿಸಿ.

Q. No. 3. b) A threw a lighted squib in a busy market, which fell on the shed of B a bread-seller, B threw it away and it fell on the shed of C. C threw away the squib which burst in the face of D. Who is liable for D ? Marks : 6

ಚಟುವಟಿಕೆಗಳಿಂದ ತುಂಬಿದ ಒಂದು ಮಾರುಕಟ್ಟೆಯಲ್ಲಿ A ನು ಒಂದು ಹೊತ್ತಿಸಿದ ಸಿಡಿಮದ್ದನ್ನು ಎಸೆದಾಗ ಅದು ರೊಟ್ಟಿಯನ್ನು ಮಾರುವ B ನ ಕಟ್ಟೆಯ ಮೇಲೆ ಬಿದ್ದಿತು. B ನು ಅದನ್ನು ದೂರ ಎಸೆದಾಗ ಅದು C ನ ಕಟ್ಟೆಯ ಮೇಲೆ ಬಿದ್ದಿತು. C ನು ಅದನ್ನು ದೂರ ಎಸೆದಾಗ ಅದು D ನ ಮುಖದಲ್ಲಿ ಸಿಡಿಯಿತು. D ನಿಗೆ ಯಾರು ಹೊಣೆಗಾರರು ?

OR/ಅಥವಾ

Q. No. 3. b) A resides in a house next to the church. B is the priest. The church bell is ringing at all hours of the day and night. What is the remedy available to A against B ? Marks : 6

A ಯು ಚರ್ಚ್ ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದಾನೆ. B ಯು ಚರ್ಚಿನ ಪಾದ್ರಿ. ಆ ಚರ್ಚಿನ ಗಂಟೆಯು ಯಾವಾಗಲೂ ಹಗಲು ರಾತ್ರಿ ಎನ್ನದೆ ಹೊಡೆಯುತ್ತಿರುತ್ತದೆ. A ಗೆ B ವಿರುದ್ಧ ಇರುವ ಪರಿಹಾರೋಪಾಯವೇನು ?

UNIT – IV

Q. No. 4. a) "The right of consortium is a mutual right of husband and wife. If any one violates it, either husband or wife can sue for damages." Discuss. Marks : 10

"ದಾಂಪತ್ಯ ಜೀವನದ ಹಕ್ಕು ದಂಪತಿಗಳ ಪರಸ್ಪರ ಹಕ್ಕಾಗಿದೆ. ಯಾರಾದರೂ ಅದನ್ನು ಉಲ್ಲಂಘಿಸಿದರೆ, ಪತಿ ಇಲ್ಲವೆ ಪತ್ನಿಯು ಪರಿಹಾರಕ್ಕಾಗಿ ದಾವೆ ಹೂಡಬಹುದು." ವಿವರಿಸಿ.

OR/ಅಥವಾ

Q. No. 4. a) Define assault and battery. Explain the difference between them. Marks : 10

ಹಲ್ಲೆ ಮತ್ತು ಪ್ರಹಾರವನ್ನು ವ್ಯಾಖ್ಯಾನಿಸಿರಿ. ಅವೆರಡರಲ್ಲಿರುವ ವ್ಯತ್ಯಾಸವನ್ನು ವಿವರಿಸಿರಿ.

Q. No. 4. b) A, a member of Parliament called B, a citizen "a smuggler" in a speech during the proceedings of Parliament. Discuss the rights of the citizen B who denies being a smuggler. Marks : 6

A ಹೆಸರಿನ ಲೋಕಸಭೆಯ ಸದಸ್ಯನೊಬ್ಬನು ಲೋಕಸಭೆಯ ಕಾರ್ಯಕಲಾಪಗಳಲ್ಲಿ B ಹೆಸರಿನ ಪ್ರಜೆಯೊಬ್ಬನನ್ನು "ಕಳ್ಳ ಸಾಗಾಣಿಕೆದಾರ" ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಆ ಪ್ರಜೆಯು ಲೋಕಸಭೆಯ ಸದಸ್ಯನ ವಿರುದ್ಧ ಕ್ರಮ ಕೈಗೊಳ್ಳಬಹುದೇ ?

OR/ಅಥವಾ

Q. No. 4. b) During darkness defendant's cattle strayed into plaintiff's garden and one of them knocked down and injured plaintiff. Is defendant liable to plaintiff ? Marks : 6

ಕತ್ತಲೆಯ ಹೊತ್ತಿನಲ್ಲಿ ಪ್ರತಿವಾದಿಯ ಜಾನುವಾರುಗಳು ವಾದಿಯ ತೋಟಕ್ಕೆ ದಾರಿತಪ್ಪಿ ನುಗ್ಗಿದವು ಮತ್ತು ಅವುಗಳಲ್ಲೊಂದು ವಾದಿಯನ್ನು ಕೆಳಕ್ಕೆ ಬೀಳಿಸಿ ಘಾಸಿಗೊಳಿಸಿತು. ಈ ಕೃತ್ಯಕ್ಕೆ ಪ್ರತಿವಾದಿಯು ಹೊಣೆಗಾರನೇ ?

## UNIT – V.

Q. No. 5. a) Explain the salient features of Consumer Protection Act, 2019. Marks : 10

ಗ್ರಾಹಕ ಸಂರಕ್ಷಣೆಯ ಅಧಿನಿಯಮ, 2019 ರ ಪ್ರಮುಖ ಲಕ್ಷಣಗಳನ್ನು ವಿವರಿಸಿ.

OR/ಅಥವಾ

Q. No. 5. a) Explain the liability without fault and application for compensation under Motor Vehicles Act, 1988. Marks : 10

ಮೋಟಾರು ವಾಹನಗಳ ಅಧಿನಿಯಮ, 1988 ರ ಅಡಿಯಲ್ಲಿ ಕ್ಷತಿಯಿಲ್ಲದ ಹೊಣೆಗಾರಿಕೆ ಹಾಗೂ ಪರಿಹಾರಕ್ಕಾಗಿ ಅರ್ಜಿಯ ಕುರಿತು ವಿವರಿಸಿ.

Q. No. 5. b) Write a short note on Third Party Insurance. Marks : 6

ಮೂರನೇ ಪಾರ್ಟಿಯ ವಿಮೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. b) Write a short note on unfair trade practices. Marks : 6

ಅನುಚಿತ ವ್ಯಾಪಾರ ಪದ್ಧತಿ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

4003/5031/6011/7011

**I Semester 3 Year LL.B./II Semester 5 Year B.Com. LL.B./B.A. LL.B. (Maj.-Min. System)/B.B.A. LL.B. Examination, June/July 2025 (Even Sem.)**

# LAW OF TORTS

Duration : 3 Hours Max. Marks : 80

**Instructions :** 
1. **Answer all five Units.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answer should be written either in English or in Kannada completely.**

UNIT – I

Q. No. 1. a) Distinguish between damnum sine injuria and injuria sine damnum with the help of leading cases. Marks : 10

ಹಾನಿಯಿಲ್ಲದ ನಷ್ಟ ಮತ್ತು ನಷ್ಟವಿಲ್ಲದ ಹಾನಿ ಇವುಗಳಿಗೆ ಇರುವ ವ್ಯತ್ಯಾಸಗಳನ್ನು ಪ್ರಮುಖ ಪ್ರಕರಣಗಳ ಸಹಾಯದಿಂದ ತಿಳಿಸಿರಿ.

OR/ಅಥವಾ

Q. No. 1. a) When does conduct of a person become actionable in tort ? How does a tort differ from a breach of contract ? Marks : 10

ವ್ಯಕ್ತಿಯ ನಡತೆಯು ಯಾವಾಗ ಅಪಕೃತ್ಯದಲ್ಲಿ ಕ್ರಮಾರ್ಹವೆನಿಸಿಕೊಳ್ಳುತ್ತದೆ ? ಅಪಕೃತ್ಯವು ಕರಾರುಭಂಗಕ್ಕಿಂತ ಹೇಗೆ ವಿಭಿನ್ನವಾಗಿರುತ್ತದೆ ?

Q. No. 1. b) State the facts and rules laid down in Donoghue v/s Stevenson case. Marks : 6

ಡೊನೇಗ್ಯೂ v/s ಸ್ಟೀವನ್‌ಸನ್ ಪ್ರಕರಣದಲ್ಲಿ ಇರುವ ಸಂಗತಿ ಮತ್ತು ನಿಯಮಗಳನ್ನು ತಿಳಿಸಿ.

OR/ಅಥವಾ

Q. No. 1. b) Write a short note on malice in law and malice in fact. Marks : 6

ಕಾನೂನಿನಲ್ಲಿ ದುರ್ಭಾವನೆ ಮತ್ತು ವಾಸ್ತವದಲ್ಲಿ ದುರ್ಭಾವನೆ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

UNIT – II

Q. No. 2. a) Explain the Doctrine of "Volenti non fit Injuria" with limitations. Marks : 10

'ಸಮ್ಮತಿ ಕೊಟ್ಟು ಪಡೆಯಲಾದ ತೊಂದರೆ' ಎಂಬ ಸಿದ್ಧಾಂತವನ್ನು ಅದರ ಪರಿಮಿತಿಗಳೊಂದಿಗೆ ವಿವರಿಸಿ.

OR/ಅಥವಾ

Q. No. 2. a) "One person is liable for wrongful act of another person" – Explain with case laws under law of torts. Marks : 10

''ಒಬ್ಬ ವ್ಯಕ್ತಿಯ ಆಕ್ರಮಕಾರಕ ಕೃತ್ಯಕ್ಕೆ ಮತ್ತೊಬ್ಬ ವ್ಯಕ್ತಿಯು ಹೊಣೆಗಾರನಾಗುತ್ತಾನೆ'' – ಇದನ್ನು ಪ್ರಕರಣಗಳೊಂದಿಗೆ ಅಪಕೃತ್ಯ ಕಾನೂನಿನ ಅಡಿಯಲ್ಲಿ ವಿವರಿಸಿ.



Downloaded by on 22-08-2025 13:33:24
uploaded on 22-08-2025 13:33:24

Q. No. 2. b) Write a short note on "Statutory Authority" as general defence. Marks : 6

''ಶಾಸನಬದ್ಧ ಪ್ರಾಧಿಕಾರ'' ಒಂದು ಸಾಮಾನ್ಯ ಪ್ರತಿವಾದ ಇದರ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 2. b) The plaintiff and her husband were employed by the defendant. Who was running a restaurant. The husband was employed as manager of the restaurant and the wife as his helper. Owing to negligence of the husband the wife sustained injuries. She sued the defendant for damages. Will she win ? Marks : 6

ವಾದಿಯು ಮತ್ತು ಅವಳ ಗಂಡನು, ಪ್ರತಿವಾದಿಯ ಉಪಹಾರ ಗೃಹದಲ್ಲಿ ನೇಮಕಗೊಂಡಿರುತ್ತಾರೆ. ವಾದಿಯ ಗಂಡನು ಉಪಹಾರ ಗೃಹದ ಮ್ಯಾನೇಜರ್‌ನೆಂದು ಮತ್ತು ವಾದಿಯು ಅವನ ಸಹಾಯಕಳೆಂದು ಕೆಲಸ ಮಾಡುತ್ತಿರುತ್ತಾರೆ. ಗಂಡನ ನಿರ್ಲಕ್ಷ್ಯದಿಂದ ವಾದಿಯು ಗಾಯಗೊಳ್ಳುತ್ತಾಳೆ. ಈ ನಷ್ಟ ಪರಿಹಾರಕ್ಕೆ ಪ್ರತಿವಾದಿಯ ಮೇಲೆ ದಾವೆ ಹೂಡುತ್ತಾಳೆ. ಅವಳು ಗೆಲ್ಲಬಹುದೇ ?

## UNIT – III

Q. No. 3. a) Explain the maxim "Injure non remota causa sed proxima spectator" with the help of leading cases. Marks : 10

''ಘಟನೆಯ ಸಮೀಪವರ್ತಿ ಕಾರಣಗಳನ್ನಲ್ಲದೆ ದೂರದ ಕಾರಣಗಳನ್ನು ಕಾನೂನು ಪರಿಗಣಿಸುವುದಿಲ್ಲ'' ಎಂಬ ಸೂಕ್ತಿಯನ್ನು ಪ್ರಮುಖ ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ

Q. No. 3. a) Discuss the facts and rules laid down in Ryland v/s Fletcher. To what extent is it modified by recent cases ? Marks : 10

ರೈಲ್ಯಾಂಡ್ v/s ಫ್ಲೆಚರ್ ಪ್ರಕರಣದ ಘಟನೆ ಮತ್ತು ನಿಯಮಗಳನ್ನು ಚರ್ಚಿಸಿ. ಎಷ್ಟರ ಮಟ್ಟಿಗೆ ಇತ್ತೀಚಿನ ಮೊಕದ್ದಮೆಗಳಿಂದ ಆ ನಿಯಮವು ಮಾರ್ಪಾಡಾಗಿದೆ ?

Q. No. 3. b) Write short note on contributory negligence. Marks : 6

ಸಹಾಯಕಾರಿ ನಿರ್ಲಕ್ಷ್ಯತೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 3. b) Write on essentials of 'private nuisance'. Marks : 6

'ಖಾಸಗಿ ಉಪದ್ರವ'ದ ಅವಶ್ಯಕತೆಗಳ ಬಗ್ಗೆ ಬರೆಯಿರಿ.

Downloaded by ... on 22-06-2025 13:36:40
uploaded on 22-06-2025 13:33:24

UNIT – IV

Q. No. 4. a) Define defamation. Explain the defences to an action for defamation. Marks : 10
ಮಾನಹಾನಿಯನ್ನು ವ್ಯಾಖ್ಯಾನಿಸಿ. ಮಾನಹಾನಿ ಮೊಕದ್ದಮೆಗೆ ಸಂಬಂಧಿಸಿದ ಪ್ರತಿರಕ್ಷೆಗಳನ್ನು ವಿವರಿಸಿ.

OR/ಅಥವಾ

Q. No. 4. a) Discuss 'Assault' and 'Battery' with the help of cases. Marks : 10
ಪ್ರಕರಣಗಳ ಸಹಾಯದಿಂದ 'ಹಲ್ಲೆ' ಮತ್ತು 'ಪ್ರಹಾರ'ಗಳ ಬಗ್ಗೆ ಚರ್ಚಿಸಿ.

Q. No. 4. b) Write a short note on "Maintenance and Champerty". Marks : 6
'ನ್ಯಾಯ ಕಾರಣವಿಲ್ಲದೆ ಮತ್ತು ದುರ್ಲಾಭಕ್ಕಾಗಿ ವ್ಯಾಜ್ಯದಲ್ಲಿ ಸಹಾಯ' ಇದರ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 4. b) Write a short note on 'false imprisonment'. Marks : 6
'ಮಿಥ್ಯ ಬಂಧೀಕರಣ'ದ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

UNIT – V

Q. No. 5. a) Explain the composition, appointment and jurisdiction of National Consumer Commission. Marks : 10
ರಾಷ್ಟ್ರೀಯ ಗ್ರಾಹಕರ ಆಯೋಗದ ರಚನೆ, ನೇಮಕ ಮತ್ತು ನ್ಯಾಯಾಧೀಕಾರದ ಕಾರ್ಯವ್ಯಾಪ್ತಿ ವಿವರಿಸಿ.

OR/ಅಥವಾ

Q. No. 5. a) Explain the 'deficiency in medical services' with the case laws. Marks : 10
'ವೈದ್ಯಕೀಯ ಸೇವೆಯಲ್ಲಿಯ ಕೊರತೆ'ಯನ್ನು ಪ್ರಕರಣಗಳೊಂದಿಗೆ ವಿವರಿಸಿ.

Q. No. 5. b) Write a short note on 'Liability without fault'. Marks : 6
'ತಪ್ಪಿಲ್ಲದ ಹೊಣೆಗಾರಿಕೆ'ಯ ಬಗ್ಗೆ ಒಂದು ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. b) 'Offences and Penalties' under H.V. Act, 1988. Marks : 6
ಮೋಟಾರು ವಾಹನ ಕಾಯಿದೆ 1988ರ ಅಡಿಯಲ್ಲಿ 'ಅಪರಾಧಗಳು ಮತ್ತು ದಂಡಗಳು'.

---

Downloaded by ... on 22-06-2025 13:36:40
uploaded on 22-06-2025 13:33:24